ನಾನು ತಮ್ಮ ಮುಖೇನ ಹಾಗೂ ಈ ಸದನದಲ್ಲಿ ವಿನಂತಿಸುವುದೇನೆಂದರೆ, ಇದರ ಬಗ್ಗೆ ಆ ಜನಗಳಿಗೆ ರಕ್ಷಣೆ ಕೊಡಬೇಕು, ಈಗಾಗಲೇ ಏನು slum clearance board notify ಮಾಡಲಿಕ್ಕೆ ಕ್ರಮವನ್ನು ತೆಗೆದುಕೊಂಡಿದೆ, ಅದನ್ನು ಆದಷ್ಟು ಬೇಗ, ಮಾಡಿ, ಅಲ್ಲಿ ಬಡವರು ಸುಮಾರು 20–25 ವರ್ಷಗಳಿಂದ ಆ ಜಾಗದಲ್ಲಿ ಏನು ನೆಲೆಸಿದ್ದಾರೆ, ಅವರಿಗೆ ಸೂಕ್ತ ರಕ್ಷಣೆಯನ್ನು ಕೊಡಬೇಕು, ಇಲ್ಲದಿದ್ದರೆ ಅಲ್ಲಿ ಬಹಳಷ್ಟು ಜನಗಳಿಗೆ ಕಷ್ಟವಾಗುತ್ತದೆ. ಅಲ್ಲಿರತಕ್ಕಂಥ ಜನ ಅವರಿಗೆ ಬಾಯಿ ಇಲ್ಲದಂಥ ರೀತಿಯಲ್ಲಿ ಆಗಿದ್ದಾರೆ. ದಯವಿಟ್ಟು ತಮ್ಮ ಮುಖೇನ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ, slum clearance board notify ಮಾಡಿರತಕ್ಕಂಥ procedings ಅನ್ನು ಮುಂದುವರಿಸಿ ಸೂಕ್ತ ಕ್ರಮ ತೆಗೆದುಕೊಂಡು ಅಲ್ಲಿಯ ಜನರಿಗೆ ರಕ್ಷಣೆ ಕೊಡಬೇಕು ಮತ್ತು ಅಂಗನವಾಡಿ ಕೇಂದ್ರದ ಟೀಚರ್‌ಗೆ ಸಹ ಬೆದರಿಕೆ ಹಾಕಿದ್ದಾರೆ. ಬಸವೇಶ್ವರನಗರ ಪೊಲೀಸ್ ಠಾಣೆಗೆ ಈ ಬಗ್ಗೆ ದೂರನ್ನು ಕೊಟ್ಟಿರತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಈ ರೀತಿ ನೆಲವನ್ನು ಕಬಳಿಸತಕ್ಕಂಥ ಅಥವಾ ಕಾನೂನಿನ ರೀತಿಯಲ್ಲಿ ಅಲ್ಲಿ proceedings ಆಗದೇ ಇರುವಾಗ ಅವರು ನೆಲವನ್ನು ಅಥವಾ ಮನೆಗಳನ್ನು ಒಡೆಯಲಿಕ್ಕೆ ಹೇಗೆ ಸಾಧ್ಯ? Karnataka Municipal ಕಾಯಿದೆ ಹಾಗೂ buildings ಬೈಲಾ ಪ್ರಕಾರವಾಗಿ ಯಾವುದೇ ಕಟ್ಟಡವನ್ನು demolish ಮಾಡಬೇಕಾದರೆ ಕಟ್ಟಬೇಕಾದರೆ ಇವರು ಅನುಮತಿಯನ್ನು ಸಂಬಂಧಪಟ್ಟ Local bodies ನಿಂದ ತೆಗೆದುಕೊಳ್ಳಬೇಕು. ಅದ್ಯಾವುದೂ ತೆಗೆದುಕೊಳ್ಳದೆ ಇವತ್ತು ಮಾಡಿರತಕ್ಕಂಥದ್ದು ಆತಂಕ ಉಂಟುಮಾಡಿದೆ ಎನ್ನುವುದರ ಬಗ್ಗೆ ಈ ಸಂದರ್ಭದಲ್ಲಿ ತಮ್ಮ ಮೂಲಕ ಸಂಬಂಧಪಟ್ಟವರ ಗಮನವನ್ನು ಸೆಳೆಯಲಿಕ್ಕೆ ಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗತಾನೆ ಈ ವಿಷಯ ಪ್ರಸ್ತಾಪಿಸಲ್ಪಟ್ಟಿದೆ. ಬಹಳ ಗುರುತರವಾದಂಥ ವಿಚಾರಗಳಿವೆ. ನಾನು ಈ ಕೂಡಲೇ ಅಧಿಕಾರಿಗಳ ಜೊತೆಗೆ ಮಾತನಾಡಿ ಸಾಧ್ಯವಾದರೆ ಈ ದಿವಸವೇ ಇಲ್ಲದಿದ್ದರೆ ನಾಳೆ ಮಾನ್ಯ ಶಾಸಕರಿಗೆ ಸಂಪೂರ್ಣ ಮಾಹಿತಿಯನ್ನು ಕೊಡತಕ್ಕಂಥದ್ದನ್ನು ಮಾಡುತ್ತೇವೆ. ರಕ್ಷಣೆಯನ್ನು ಖಂಡಿತವಾಗಿ ಕೊಡುತ್ತೇವೆ.

ವಿಷಯ(ಕ) : ತುಮಕೂರು ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ

ಶ್ರೀ ಕೆ.ಎನ್. ರಾಜಣ್ಣ (ಬೆಳ್ಳಾವಿ) : ತುಮಕೂರು ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ವಶದಲ್ಲಿರತಕ್ಕಂಥ ರಸ್ತೆಗಳು, ಜಿಲ್ಲಾ ಪಂಚಾಯತಿ ವಶದಲ್ಲಿ ಬರತಕ್ಕಂಥ ರಸ್ತೆಗಳು ಅದು ಎಷ್ಟು ಹಾಳಾಗಿದೆ ಎಂದರೆ ಯಾರಾದರೂ ಗರ್ಭಿಣಿ ಹೆಂಗಸು ಆ ರಸ್ತೆಯಲ್ಲಿ ಪ್ರಯಾಣ ಮಾಡಿದರೆ ಆಸ್ಪತ್ರೆಗೆ ತಲುಪತಕ್ಕಂಥ ಅವಶ್ಯಕತೆಯೇ ಇರುವುದಿಲ್ಲ. ಆ ಮಟ್ಟಕ್ಕೆ ಆ ರಸ್ತೆಗಳು ಹಾಳಾಗಿವೆ. ಅಂಥ ರಸ್ತೆಗಳನ್ನು ದುರಸ್ತಿ ಮಾಡಲಿಕ್ಕೆ ಪದೇ ಪದೇ ಸಂಬಂಧಪಟ್ಟಂಥ ಇಲಾಖೆಯ ಅಧಿಕಾರಿಗಳಿಗೆ ನಾವು ಮನವಿಮಾಡಿದರೂ ಕೂಡ ಕ್ರಮ ಜರುಗಿಸಿಲ್ಲ ಎಂದು ಹೇಳಿ 15ನೇ ತಾರೀಖು ಆ ರಸ್ತೆಯಲ್ಲಿ ಓಡಾಡತಕ್ಕಂಥ ಪ್ರಯಾಣಿಕರು ಎಲ್ಲರೂ ಕೂಡ :28– ಪ್ರತಿಭಟನೆಯನ್ನು ಮಾಡಿದ್ದಾರೆ, ಇಷ್ಟೊಂದು ಜನರಿಂದ ಅಲ್ಲಿ ಪ್ರತಿಭಟನೆ ಇದ್ದರೂ ಕೂಡ ಈ ಬಗ್ಗೆ ಸೂಕ್ತ ಗಮನವನ್ನು ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಗಳು ವಹಿಸಿಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಾ ಈ ಒಂದು ವಿಚಾರದಲ್ಲಿ ಸರ್ಕಾರದ ವತಿಯಿಂದ ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕು. ಲೋಕೋಪಯೋಗಿ

ವಶದಲ್ಲಿ ಬರತಕ್ಕಂಥ ರಸ್ತೆಗಳು ಹಾಗೂ ಜಿಲ್ಲಾಪಂಚಾಯತಿ ವಶದಲ್ಲಿ ಬರತಕ್ಕಂಥ ರಸ್ತೆಗಳನ್ನು ಆದಷ್ಟು ಜಾಗ್ರತೆ ದುರಸ್ಥಿ ಮಾಡಿಸತಕ್ಕಂಥ ಶೀಘ್ರವಾಗಿ ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಮಳೆ ಜಾಸ್ತಿ ಬಂದಿರುವಂಥ ಪ್ರದೇಶದಲ್ಲಿ ಈ ರಈತಿ ರಸ್ತೆಗಳು ಹಾಳಾಗಿವೆ ಎನ್ನುವುದನ್ನು ಅನೇಕ ಶಾಸಕರು ಮತ್ತು ಸಾರ್ವಜನಿಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಪ್ರಕೃತಿ ವಿಕೋಪ ನಿಧಿಯಿಂದ ನಮಗೆ ಈಗಾಗಲೇ ಬೇರೆ ಬೇರೆ ಜಿಲ್ಲೆಗಳಿಗೆ ವಹಿಸಿಕೊಟ್ಟಿರುವಂಥ ಆಹಾರಧಾನ್ಯಗಳನ್ನು ಉಪಯೋಗಿಸಿ ಅದರ ಮೂಲಕ ತುರ್ತಾಗಿ ಕೆಲಸವನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ. ಆದರೆ ಅದಕ್ಕೆ ಬೇಕಾಗಿರತಕ್ಕಂಥ ನಗದು ಹಣದ ಹೊಂದಾಣಿಕೆ ಇಲ್ಲಿಯವರೆಗೂ ಕುಡ ಆಗಿಲ್ಲ. ಈಗಾಗಲೇ ಉಪ ಮುಖ್ಯಮಂತ್ರಿಗಲ ಜೊತೆಗೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಆ ನಗದು ಹಣವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಈ ಪ್ರಕೃತಿ ವಿಕೋಪ ನಿಧಿಯಿಂದ ಎಷ್ಟು ಸಾಧ್ಯವೋ ಅಷ್ಟನ್ನು ಆಯಾಯ ಜಿಲ್ಲೆಯ ಶಾಸಕರ ಶಿಫಾರಸ್ಸಿನ ಮೇಲೆ ಹಾಳಾಗಿರತಕ್ಕಂಥ ರಸ್ತೆಗಳ ದುರಸ್ಥಿ ಕಾರ್ಯವನ್ನು ಕೈಗೊಳ್ಳುತ್ತೇವೆ ಮತ್ತು ಲೋಕೋಪಯೋಗಿ ಇಲಾಖೆಯ ರಸ್ತೆಗಳ ವಿಚಾರದಲ್ಲಿಯೂ ಕೂಡ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಸದನದಲ್ಲಿ ತಮ್ಮ ಅಪ್ಪಣೆಯ ಮೇರೆಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ವಿಷಯ (ಖ) : ಆಶ್ರಯ ಮನೆಗಳ ರಿಜಿಸ್ಟ್ರೇಷನ್ ಅವಧಿಯನ್ನು ವಿಸ್ತರಿಸುವ ಬಗ್ಗೆ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಆಶ್ರಯ ಮನೆಗಳ ವಿತರಣೆಯನ್ನು ಚುನಾವಣೆಯ ಪೂರ್ವದಲ್ಲಿ ನಾವು ಮಾಡಿದ್ದೆವು. ಅದಕ್ಕೆ ರಾಜೀವಗಾಂಧಿ ಹೌಸಿಂಗ್ ಕೊ–ಆಪರೇಟೀವ್ ಸೊಸೈಟಿಯಿಂದ ಒಂದು ಸರ್ಕ್ಯುಲರ್ ಹೊರಡಿಸಿ ಮೇ 31ನೇ ತಾರೀಖಿನೊಳಗೆ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳದಿದ್ದರೆ ಅದನ್ನೆಲ್ಲವನ್ನು ಕ್ಯಾನ್ಸಲ್ ಮಾಡುತ್ತೇವೆಂದು ಹೇಳಿದ್ದರೆ ಪುನಃ ಅದನ್ನು ಜೂನ್ 30 ನೇ ತಾರೀಖಿನವರೆಗೆ extend ಮಾಡಿದ್ದಾರೆ. ಆದರೆ ಅವರಿಗೆ ರಿಜಿಸ್ಟ್ರೇಷನ್ ಮಾಡಬೇಕಾದರೆ ಆರ್.ಟಿ.ಸಿ. ಎಲ್ಲವನ್ನೂ ಪಡಯಬೇಕಾಗುತ್ತದೆ. ಈ ಚುನಾವಣೆ ಸಂದರ್ಭದಲ್ಲಿ ಕಂದಾಯ ಇಲಾಖಾಧಿಕಾರಿಗಳು ಎಲ್ಲರೂ ಚುನಾವಣೆಯ ಕೆಲಸದಲ್ಲಿದ್ದರು. ಆರ್.ಟಿ.ಸಿ. ಪಡೆಯುವುದು, ರಿಜಿಸ್ಟರ್ ಮಾಡುವುದು ಬಹಳ ತಡವಾಗುತ್ತಿರುವುದರಿಂದ, ಅದನ್ನು ಕ್ಯಾನ್ಸಲ್ ಮಾಡಬಾರದು. ಒಂದು ವೇಳೆ ಟೈಂ ಕೊಡುವುದಾದರೆ ಡಿಸೆಂಬರ್‌ವರೆಗೆ ಎಕ್ಸ್‌ಟೆಂಡ್ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳುತ್ತೇನೆ. ಏಕೆಂದರೆ, ಕೊಟ್ಟು ಉದ್ದೇಶವೇ ಸಫಲವಾಗುವುದಿಲ್ಲ. ಅದಕ್ಕೆ ಗಡಿಯನ್ನು ತೆಗೆದು ಹಾಕಬೇಕು. ಇಲ್ಲದಿದ್ದರೆ, ಡಿಸೆಂಬರ್‌ವರೆಗೆ ಆದರೂ ಎಕ್ಸ್‌ಟೆಂಷನ್ ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈಗಾಗಲೇ ಅನೇಕ ಶಾಸಕರು ಆಶ್ರಯ ಯೋಜನೆಗಳ ವಿಚಾರದಲ್ಲಿ ಪ್ರಸ್ತಾಪಿಸಿದ್ದಾರೆ. ಈಗಾಗಲೇ ನಾವು ನಿರ್ಧಾರ ತೆಗೆದುಕೊಂಡಿದ್ದೇವೆ. ಮುಂದೆ ಆಶ್ರಯ ಯೋಜನೆಗಳಾಗಬಹುದು ಅಥವಾ ಅದರ ಸಮಿತಿಯಗಳಾಗಬಹುದು ಅಥವಾ ಆರಾಧನಾ ಸಮಿತಿಗಳಾಗ ಬಹುದು, ಆ ಸಮಿತಿಗಳನ್ನು ಆಯಾಯ ತಾಲ್ಲೂಕಿನಲ್ಲಿ, ಆಯಾಯ ಶಾಸಕರ ಅಧ್ಯಕ್ಷತೆಯಲ್ಲಿ ಸಭೆಯನ್ನು, ಸಮಿತಿಯನ್ನು ಮಾಡುವ ನಿರ್ಧಾರ ಮಾಡಿದ್ದೇವೆ. ಅದರ ಜೊತೆಗೆ, ಸುತ್ತೋಲೆ ಕೂಡ ಹೋಗುತ್ತದೆ. ಆದರೆ, ಹಿಂದಿನ ಬಾರಿ ಯಾರ್ಯಾರು ಫಲಾನುಭವಿಗಳ ಯಾದಿಯನ್ನು ತಯಾರಿಸಿದ್ದಾರೆ, ಅದರಲ್ಲಿ ಕೆಲವು